# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ

ನೋಂದಣಿ ಸಂಖ್ಯೆ: ಸನೀರಾ12/ವಿ-1/ನೋಂದಣಿ/2526/2014-15 ದಿನಾಂಕ:17-07-2014

1 ನೇ ಮಹಡಿ, ಶ್ರೀ ರಾಘವೇಂದ್ರ ಕಾಂಪ್ಲೆಕ್ಸ್, ಸಂತೋಷಿ ಮಾತ ದೇವಸ್ಥಾನ ರಸ್ತೆ,
ಪಂಪಾ ಹೌಸಿಂಗ್ ಕಾಲೋನಿ, ಮಾನವಿ-584123, ಜಿ. ರಾಯಚೂರು

www.shivapriyapssn.com | 08538-470321

# 12ನೇ ಸಾಮಾನ್ಯ ಸಭೆಯ ಸೂಚನಾ ಪತ್ರ

**ದಿನಾಂಕ: 06-09-2026 ಸಮಯ: 11:00 ಬೆಳಿಗ್ಗೆ**

## 2025-26

Shivapriya Pattina Souharda
Sahakari Sangha Ni., Manvi

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

(ನೊಂದಣಿ ಸಂಖ್ಯೆ : ಸನಿರಾ12/ವಿ-1/ನೊಂದಣಿ/2526/2014-15 ದಿ:17-07-2014)
1ನೇ ಮಹಡಿ,ರಾಘವೇಂದ್ರ ಕಾಂಪ್ಲೆಕ್ಸ್, ಸಂತೋಷಿ ಮಾತಾ ದೇವಸ್ಥಾನ ರಸ್ತೆ, ಪಂಪಾ ಹೌಸಿಂಗ್ ಕಾಲೋನಿ,
ಮಾನವಿ-584123 ಜಿ॥ ರಾಯಚೂರುದೂ॥ 08538-470321, www.shivapriyapssn.com

## 12ನೇ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯ ಬಂಧುಗಳೇ,

ಸಹಕಾರಿಯ ಸನ್ 2025-26ನೇ ಸಾಲಿನ ಸಹಕಾರಿಯ ಮಹಾ ಸಭೆಯನ್ನು ದಿನಾಂಕ 06/09/2026 ರಂದು ರವಿವಾರ ಬೆಳಿಗ್ಗೆ 11:00 ಗಂಟೆಗೆ ಸಹಕಾರಿಯ ಕಾರ್ಯಾಲಯದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಾಕೀರ ಮೋಹಿಯುದ್ದಿನ್ ಇವರ ಅಧ್ಯಕ್ಷತೆಯಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಕಾರಣ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಸರ್ವ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಂಡು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

## ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ವಿಷಯಗಳು

1) ಪ್ರಸಕ್ತ ಸಾಲಿನ (ಸನ್ 2025-26) 12 ನೇ ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದಾಖಲಿಸುವುದು.
2) ಸಹಕಾರಿಯ 11 ನೇ ವಾರ್ಷಿಕ ಮಹಾಸಭೆಯ ನಡುವಳಿಗಳನ್ನು ಓದಿ ದಾಖಲಿಸುವುದು ಮತ್ತು ಅನುಮೋದಿಸುವುದು.
3) ಸನ್2025-26ನೇ ಸಾಲಿನ ವಾರ್ಷಿಕ ವರದಿಗೆ ಒಪ್ಪಿಗೆ ಕೊಡುವ ಬಗ್ಗೆ.
4) ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಓದಿ ಒಪ್ಪಿಗೆ ನೀಡುವುದು.
5) ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯ ಪರಿಗಣನೆ.
6) ಸನ್2025-26ನೇ ಸಾಲಿನ ಆಯ-ವ್ಯಯ ಪತ್ರಿಕೆ ಹಾಗೂ ಅಢಾವೆ ಪತ್ರಿಕೆ ಒಪ್ಪಿಗೆ ನೀಡುವುದು.
7) ಸನ್2025-26 ನೇ ನಿವ್ವಳ ಲಾಭವನ್ನು ವಿಲೇವಾರಿ ಮಾಡುವ ಬಗ್ಗೆ.
8) ಸಹಕಾರಿಯ ಸನ್2026-27ನೇ ಸಾಲಿಗೆ ಲೆಕ್ಕಪರಿಶೋಧಕರ ಹಾಗೂ ಅಂತರಿಕ ಲೆಕ್ಕಪರಿಶೋಧಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಧಾರಣೆ ಬಗ್ಗೆ.
9) ಸನ್2026-27ನೇ ಸಾಲಿನ ಅಂದಾಜು ಮುಂಗಡ ಪತ್ರಿಕೆಗೆ ಒಪ್ಪಿಗೆ ನೀಡುವುದು.
10) ಹಿಂದಿನ ವರ್ಷದ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಸಭೆ ಅನುಮೋದನೆ ನೀಡುವ ಬಗ್ಗೆ.
11) ಉಪವಿಧಿ ತಿದ್ದುಪಡಿ ಕುರಿತು.
12) ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ ವಿವರ ವನ್ನು ಪರಿಗಣನೆಗೆ ತೆಗೆದುಕ್ಕೊಳ್ಳುವುದು & ಅದರ ನಿರ್ಮಾಣದ ಬಗ್ಗೆ.
13) ಸಹಕಾರಿಯ ಸಿಬ್ಬಂದಿ ವೃಂದ ಬಲ&ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳ ಪಾವತಿಗಳ ಪರಿಗಣನೆ ಮತ್ತು ಸೇವಾ ನಿಯಮಗಳನ್ನು ಮತ್ತು ಇತರೆ ವ್ಯವಹಾರದ ನಿಯಮಗನ್ನು ಅನುಮೋದಿಸುವ ಬಗ್ಗೆ.
14) ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಅಂಗೀಕರಿಸುವ ಕುರಿತು.
15) ಸಹಕಾರಿಯ ಅಧ್ಯಕ್ಷರು , ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಸಂಬಂದಿ ಸಿಬ್ಬಂದಿಗಳ ನೇಮಕವಾದ ಕುರಿತು.
16) ಸಹಕಾರಿಯ ಉಪವಿಧಿ ಸಂಖ್ಯೆ-32(2)ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳ ಬಗ್ಗೆ ಚರ್ಚೆ.
17) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಎನ್.ಬಿ. ನವೀನ್‌ಕುಮಾರ್
ಮುಖ್ಯ ಕಾರ್ಯನಿರ್ವಣಾಧಿಕಾರಿ

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## 12 ನೇ ವಾರ್ಷಿಕ ಸಾಮಾನ್ಯ ಸಭೆಯ ಟಿಪ್ಪಣಿಗಳು

**ವಿಷಯ 1:** ಪ್ರಸಕ್ತ ಸಾಲಿನ (ಸನ್2025-26 ನೇ) ಸಾಲಿನ 12 ನೇ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲಿಸುವುದು.

**ಟಿಪ್ಪಣಿ1 :** ಸನ್2025-26 ನೇ ಸಾಲಿನ 12 ನೇ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲಿಸಲು ಸಭೆಗೆ ಮಂಡಿಸಿದೆ.

**ವಿಷಯ2:** ಹಿಂದಿನ ಸಾಲಿನ (ದಿನಾಂಕ: 26/07/2025ರಂದು) ನಡೆದ ಸಹಕಾರಿಯ11 ನೇ ಸಾಮಾನ್ಯ ಸಭೆಯ ನಡುವಳಿಗಳನ್ನು ಓದಿ ದಾಖಲಿಸುವುದು.

**ಟಿಪ್ಪಣಿ2:** ದಿನಾಂಕ: 26/07/2025ರಂದು ನಡೆದ ಸಹಕಾರಿಯ 11 ನೇ ವಾರ್ಷಿಕ ಸಾಮಾನ್ಯ ಸಭೆಯ ನಡುವಳಿಗಳನ್ನು ಓದಿ ದಾಖಲಿಸಲು ಸಭೆಗೆ ಮಂಡಿಸಿದೆ.

**ವಿಷಯ 3:** ಸನ್ 2025-26 ನೇ ಸಾಲಿನ ವಾರ್ಷಿಕ ವರದಿಗೆ ಒಪ್ಪಿಗೆ ಕೊಡುವ ಬಗ್ಗೆ.

**ಟಿಪ್ಪಣಿ3 :** ಸನ್ 2025-26 ನೇ ಸಾಲಿನ ವಾರ್ಷಿಕ ವರದಿಯು (ಪುಟ ಸಂಖ್ಯೆ 04 & 05 ರಲ್ಲಿ ನೀಡಲಾಗಿದೆ) ಸಂಪೂರ್ಣ ವರಗಳನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 4:** ಸನ್ 2025-26 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಓದಿ ಒಪ್ಪಿಗೆ ನೀಡುವದು.

**ಟಿಪ್ಪಣಿ 4 :** ಸನ್ 2025-26 ನೇ ಸಾಲಿನ 12ನೇ ವಾರ್ಷಿಕ ಮಹಾ ಸಭೆಯ ಸೂಚನಾ ಪತ್ರದಲ್ಲಿ ಸಿ.ಎ. ಎಸ್. ಡಿ. ಪ್ರಸಾದ್ ವಿರಪನೇನಿ, ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ &ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಮಾನವಿ 584123 ತಾ॥ ಮಾನವಿ, ಜಿ॥ ರಾಯಚೂರು ಇವರು ನೀಡಿರುವ ಸನ್ 2025-26 ನೇ ಸಾಲಿನ ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕಪರಿಶೋದಿತ ತಃಖ್ತೆಗಳನ್ನು ಸಭೆಗೆ ಸಾದರ ಪಡಿಸಲಾಗುತ್ತಿದೆ ಇದನ್ನು ಸಭೆಪರಿಶೀಲಿಸಿ ಮಹಾ ಸಭೆಯಲ್ಲಿ ಅನುಮೊದಿಸ ಬಹುದಾಗಿದೆ.

**ವಿಷಯ5 :** ಸನ್ 2025-26 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯ ಪರಿಗಣನೆ.

**ಟಿಪ್ಪಣಿ 5 :** ಸನ್ 2025-26ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಸಭೆಗೆ ಸಾದರ ಪಡಿಸಲಾಗುತ್ತಿದೆ ಇದನ್ನು ಸಭೆ ಪರಿಶೀಲಿಸಿ ಮಹಾ ಸಭೆಯಲ್ಲಿ ಅನುಮೋದಿಸ ಬಹುದಾಗಿದೆ ಹಾಗೂ ಲೆಕ್ಕ ಪರಿಶೋಧನ ವರದಿಗೆ ಆಢಳಿತ ಮಂಡಳಿಯು ಸಲ್ಲಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿ ಮಹಾ ಸಭೆಯಲ್ಲಿ ಅನುಮೋದಿಸಬಹುದಾಗಿದೆ.

**ವಿಷಯ6:** ಸನ್ 2025-26 ನೇ ಸಾಲಿನ ಲೆಕ್ಕಪರಿಶೋಧಿತ ಲಾಭ ಹಾನಿ ಖಾತೆ ಹಾಗೂ ಅಢವೆ ಪತ್ರಿಕೆ ಓದಿ ಒಪ್ಪಿಗೆ ನೀಡುವುದು.

**ಟಿಪ್ಪಣಿ 6:** ಸನ್ 2025-26 ನೇ ಸಾಲಿನ ಸಿ.ಎ. ಎಸ್. ಡಿ. ಪ್ರಸಾದ್ ವಿರಪನೇನಿ, ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ & ಅಸೋಸಿಯೇಟ್ಸ್,ಸನ್ನದು ಲೆಕ್ಕ ಪರಿಶೋಧಕರು, ಮಾನವಿ ಇವರು ಪರಿಶೀಲಿಸಿರುವ ಸಹಕಾರಿಯ ಲೆಕ್ಕಪರಿಶೋಧಿತ ಲಾಭ-ಹಾನಿ ಖಾತೆ ಹಾಗೂ ಅಢವೆ ಪತ್ರಿಕೆಗಳು ಈ ಮಹಾಸಭೆಯ ಸೂಚನಾ ಪತ್ರದಲ್ಲಿ ನೀಡಲಾಗಿದೆ ಇದನ್ನು ಓದಿ ಧೃಢೀಕರಿಸಿ ಅನುಮೋದಿಸಬಹುದಾಗಿದೆ. (ಪುಟ ಸಂಖ್ಯೆ 08 ರಲ್ಲಿ ನೀಡಲಾಗಿದೆ)

**ವಿಷಯ7:** ಸನ್ 2025-26 ನೇ ಸಾಲಿನಲ್ಲಿ ನಿವ್ವಳ ಲಾಭವನ್ನು ವಿಲೇವಾರಿ ಮಾಡುವ ಬಗ್ಗೆ.

**ಟಿಪ್ಪಣಿ7:** ಸನ್ 2025-26ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ನಿವ್ವಳ ಲಾಭದ ವಿಲೇವಾರಿಯನ್ನು ಸಹಕಾರಿಯ ಉಪನಿಯಮ ದಂತೆ ವಿಂಗಡಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಇದರ ವಿವರ ಈ ಮಹಾಸಭೆಯ ಸೂಚನಾ ಪತ್ರದಲ್ಲಿ ನೀಡಲಾಗಿದೆ ಇದನ್ನು ಅನುಮೋದಿಸಬಹುದಾಗಿದೆ.

**ವಿಷಯ8:** ಸಹಕಾರಿಯ ಸನ್2026-27ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರಿಗೆಕೊಡಬಹುದಾದ ಸಂಭಾವನೆ ನಿರ್ಧಾರಣೆ ಬಗ್ಗೆ.

**ಟಿಪ್ಪಣಿ 8:** ಸನ್ 2026-27 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನೆ ಇಲಾಖೆಯ ಅನುಮೋದಿತ ಚಾರ್ಟೆಡ್ ಅಕೌಂಟೆಂಟ್ ಪಟ್ಟಿಯಲ್ಲಿರುವವರನ್ನು ನೇಮಿಸಿಕೋಳ್ಳುವ ಅಥವಾ ಸಹಕಾರ ಇಲಾಖಾ ಲೆಕ್ಕ ಪರಿಶೋಧಕರಿಂದ ಲೆಕ್ಕಪರಿಶೋಧನೆಗೆ.

ನೇಮಿಸಿಕೊಳ್ಳುವ ಅಧಿಕಾರವನ್ನು ಹಾಗೂ ಲೆಕ್ಕ ಪರಿಶೋಧಕರಿಗೆ ನೀಡಬಹುದಾದ ಸಂಭಾವನೆ ನಿರ್ದಾರಣೆ ಮಾಡುವ ಅಧಿಕಾರವನ್ನು ನಿರ್ದೇಶಕ ಮಂಡಳಿಯವರಿಗೆ ನೀಡಬೇಕೆಂದು ಮಹಾಸಭೆಯ ಅನುಮೋದನೆಗೆ ಮಂಡಿಸಲಾಗಿದೆ, ಸಭೆಯು ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೋದಿಸಬಹುದಾಗಿದೆ

**ವಿಷಯ9 :** ಸನ್ 2026–27ಸಾಲಿನ ಅಂದಾಜು ಮುಂಗಡ ಪತ್ರಿಕೆಗೆ ಒಪ್ಪಿಗೆ ನೀಡುವುದು.

**ಟಿಪ್ಪಣಿ 9 :** ಸನ್2026–27 ನೇ ಸಾಲಿನ ವಾರ್ಷಿಕ ಮುಂಗಡ ಪತ್ರಿಕೆಗೆ ವಿವರವನ್ನು ಅನುಭಂದ 1ರಲ್ಲಿ (ಪುಟ ಸಂ.9 ರಲ್ಲಿ) ವಿವರಿಸಿದ್ದು.ಇದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ
ಈ ಅಂದಾಜು ಮುಂಗಡ ಪತ್ರಿಕೆಯನ್ನು ಪರಿಶೀಲಿಸಿ ಸಭೆಯು ಅನುಮೋದಿಸಬಹುದಾಗಿದೆ.

**ವಿಷಯ10:** ಹಿಂದಿನ ವರ್ಷದ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಸಭೆಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ10:** ಸನ್ 2025–26 ನೇ ಸಾಲಿನ ಹೆಚ್ಚುವರಿಯಾದ ವೆಚ್ಚಗಳನ್ನು ಅನುಭಂದ 1ರಲ್ಲಿ(ಪುಟ ಸಂ.9ರಲ್ಲಿ) ನೀಡಲಾಗಿದೆ ಪರಿಶೀಲಿಸಿ ಮಹಾಸಭೆಯು ಅನುಮೋದಿಸಬಹುದಾಗಿದೆ.

**ವಿಷಯ 11:** ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.

**ಟಿಪ್ಪಣಿ 11 :** ಯಾವುದೆ ತಿದ್ದುಪಡಿ ಇರುವುದಿಲ್ಲ.

**ವಿಷಯ 12:** ಸಹಕಾರಿಯ ಸ್ವಂತ ನಿವೇಶನ ಅಥವಾಕಟ್ಟಡವನ್ನು ಖರೀದಿಸಿದ ವಿವರ ವನ್ನು ಪರಿಗಣನೆಗೆ ತೆಗೆದುಕ್ಕೊಳ್ಳುವುದು & ಅದರ ನಿರ್ಮಾಣದ ಬಗ್ಗೆ.

**ಟಿಪ್ಪಣಿ 12:** ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ್ದು ಮುಂದೆ ಈ ನಿವೇಶನ ಮಾರಿ ಮುಖ್ಯ ರಸ್ತೆಯಲ್ಲಿ ಯಾವುದಾದರು ನಿವೇಶನ ಅಥವಾ ಕಟ್ಟಡವನ್ನು ಖರೀದಿ ಇದರ ಬಗ್ಗೆ ಮುಂದಿನ ನಿರ್ಣಯಕ್ಕೆ ಸಭೆಯಲ್ಲಿ ಚರ್ಚೆಗೆ ಮಂಡಿಸಿದೆ. ಅದರ ನಿರ್ಮಾಣದ ಬಗ್ಗೆ ಸಭೆಯು ಚರ್ಚಿಸಿ ನಿರ್ಣಯಿಸಲು ಸಭೆಗೆ ಮಂಡಿಸಲಾಗಿದೆ ಹಾಗೂ ಸಹಕಾರಿಯ ಕಟ್ಟಡ ನಿಧಿಗೆ ಶೇ.20% ನ್ನು ಸಹಕಾರಿಯ ಲಾಭದಲ್ಲಿ ವರ್ಗೀಕರಿಸಲು ಸಭೆಯ ಅನುಮೋದನೆಗೆ ಕೋರಲಾಗಿದೆ.

**ವಿಷಯ 13:** ಸಹಕಾರಿಯ ಸಿಬ್ಬಂದಿ ವೃಂದ ಬಲ& ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ& ಸೇವಾ ನಿಯಮಗಳನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ 13:** ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ& ಸೇವಾ ನಿಯಮಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 14:** ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರುಅಂಗೀಕರಿಸುವಕುರಿತು.

**ಟಿಪ್ಪಣಿ 14:** ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರುಪರಿಶೀಲಿಸಿ ಸಹಕಾರಿಯ ಸದಸ್ಯರಿಗೆ ಅನುಕೂಲ ಮಾಡಿಕೊಡಲು ಹಾಗೂ ಪ್ರಸಕ್ತ ನಿಯಮಗಳನ್ನು ಪಾಲಿಸಲು ಸಭೆಗೆ ಮಂಡಿಸಲಾಗಿದ್ದು ಸಭೆಯು ಪರಿಶೀಲಿಸಿ ಅನುಮೊದನೆ ಮಾಡಬಹುದಾಗಿದೆ.

**ವಿಷಯ15:** ಸಹಕಾರಿಯ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಸಂಭಂದಿಗಳನ್ನು ಸಿಬ್ಬಂದಿಗಳ ನೇಮಕವಾದ ಕುರಿತು

**ಟಿಪ್ಪಣಿ 15:** ಅಂತಹಯಾವುದೇ ನೇಮಕಾತಿಆಗಿರುವುದಿಲ್ಲಾ.

**ವಿಷಯ16:** ಸಹಕಾರಿಯಉಪವಿಧಿ ಸಂಖ್ಯೆ–32(2)ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳ ಬಗ್ಗೆ ಚರ್ಚೆ

**ಟಿಪ್ಪಣಿ 16:** ವಿಷಯವಾರು ಸಭೆಯಲ್ಲಿ ಚರ್ಚಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. (ಪುಟ ಸಂಖ್ಯೆ 06 & 07ರಲ್ಲಿ ನೀಡಲಾಗಿದೆ)

**ವಿಷಯ 17:** ಅಧ್ಯಕ್ಷರ ಅಪ್ಪಣೆ ಮೇರೆಗೆಇತರೆ ವಿಷಯಗಳು.

**ಟಿಪ್ಪಣಿ 17:**

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## ವಿಷಯ & ಟಿಪ್ಪಣಿ: 3 ರ ವಿವರಣೆ
## ಸನ್ 2025–26 ನೇ ಸಾಲಿನ ವಾರ್ಷಿಕ ವರದಿ

ಆತ್ಮೀಯ ಸಹಕಾರಿ ಬಂಧುಗಳೇ,

ತಮ್ಮೆಲ್ಲರಿಗೆ ತಿಳಿದಿರುವಂತೆ ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು 2014 ನೇ ಸಾಲಿನಲ್ಲಿ ಸ್ಥಾಪನೆಗೊಂಡು ಮಾನವಿ ನಗರ ಹಾಗೂ 2015–16 ನೇ ಸಾಲಿನಿಂದಇಡೀರಾಯಚೂರುಜಿಲ್ಲೆಯ ನಮ್ಮ ಸಹಕಾರಿಯ ಸದಸ್ಯರಿಗೆ ಸಹಕಾರಿಯಿಂದ ಸೇವೆಯನ್ನು ನೀಡುತ್ತಿದ್ದು ಹಾಗು 2018–19ನೇ ಸಾಲಿನಲ್ಲಿ ರಾಯಚೂರು ಜಿಲ್ಲೆ ಸೇರಿದಂತೆ ಬಳ್ಳಾರಿ, ಕೊಪ್ಪಳ, ಯಾದಗೀರಿ, ಕಲಬುರಗಿ, ಜಿಲ್ಲೆಯನ್ನೊಳಗೊಂಡಿರುತ್ತದೆ, ಹಾಗೂ 12 ನೇ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮುಂದಿಡಲು ಹರ್ಷಿಸುತ್ತೇನೆ.

### ಸಹಕಾರಿಯ ಧ್ಯೇಯ ಮತ್ತು ಉದ್ದೇಶ:

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು ಕರ್ನಾಟಕ ಸೌಹಾರ್ದ ಕಾಯಿದೆ 1997ರ ಅನುಗುಣವಾಗಿ ಸಹಕಾರಿಯ ವ್ಯವಹಾರಗಳನ್ನು ಕೈಗೊಳ್ಳುವುದು. ಆರ್ಥಿಕವಾಗಿ ಹಿಂದುಳಿದವರಿಗೆ, ದುರ್ಬಲ ವರ್ಗದವರಿಗೆ, ವ್ಯಾಪಾರಿಗಳಿಗೆ ಅವರ ಆರ್ಥಿಕ ಮಟ್ಟ ಸುಧಾರಿಸುವಂತಹ ಗೃಹ ಕೈಗಾರಿಕೆ, ವ್ಯಾಪಾರ ಮುಂತಾದವುಗಳಿಗೆ ಸಾಲ ನೀಡುವುದು. ನೌಕರದಾರರಿಗೆ, ಉದ್ದಿಮೆದಾರರಿಗೆ, ಸ್ವಯಂ ಉದ್ಯೋಗಿಗಳಿಗೆ ಅವರವರ ಬೇಡಿಕೆಗೆ ಅನುಗುಣವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಲವನ್ನು ಕೊಡುವುದು. ಸದಸ್ಯರಿಂದ, ಠೇವಣಿ ಸಂಗ್ರಹಿಸುವುದು ಮತ್ತು ಸಂಸ್ಥೆಯ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಶುದ್ಧ ಹಸ್ತದಿಂದ ವ್ಯವಹರಿಸುವುದು ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿಯ ಧ್ಯೇಯ ಮತ್ತು ಉದ್ದೇಶವಾಗಿರುತ್ತದೆ.

### ಸಹಕಾರಿಯ ಪ್ರಗತಿ:

ತಮ್ಮ ಸಹಕಾರಿಯು ಸಾಧಿಸಿದ ಪ್ರಗತಿಯುತಮ್ಮೆಲ್ಲರ ಸೂಚನೆ ಮತ್ತು ಸಹಕಾರದ ಪ್ರತೀಕವಾಗಿದೆ. ಆರ್ಥಿಕ ಶುದ್ಧತೆ ಹಾಗೂ ಆರ್ಥಿಕ ಭದ್ರತೆ ನಮ್ಮ ಸಹಕಾರಿಯಲ್ಲಿ ಇರುವುದರಿಂದ ಆರಂಭಿಕ ವರ್ಷಗಳಿಂದ ಉತ್ತಮ ಫಲಿತಾಂಶ ಬಂದಿದ್ದು. ಪ್ರಸಕ್ತ ಸನ್ 2025–26ನೇ ಸಾಲಿನಲ್ಲಿ ಸಹಕಾರಿಯು ಠೇವಣಿ ಸಂಗ್ರಹಣೆ, ಸಾಲ ವಿತರಣೆ, ವಾರ್ಷಿಕ ವಹಿವಾಟು, ವಸೂಲಾತಿ ಹಾಗೂ ಲಾಭ ಗಳಿಕೆಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ. ಪ್ರಸ್ತುತ ಸಾಲಿನಲ್ಲಿ ರೂ.1,11,01,363/– ನಿವ್ವಳ ಲಾಭವನ್ನು ಗಳಿಸಿ ಸಹಕಾರಿಯು ಪ್ರಗತಿಯತ್ತ ಸಾಗುತ್ತಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಎನಿಸುತ್ತದೆ.

ಪರಸ್ಪರ ಸಹಕಾರ, ಹಿತಚಿಂತನೆ ಹಾಗೂ ಹಣಕಾಸಿನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಪ್ರಾರಂಭಿಸಲಾದ ನಮ್ಮ ನಿಮ್ಮ ಸಹಕಾರಿಯು ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಹೊಂದುತ್ತಾ ಬಂದಿರುವ ನಮ್ಮ ಸಹಕಾರಿಯು ರಾಯಚೂರು ಜಿಲ್ಲೆ ನಾಗರೀಕರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿ ಪ್ರಗತಿ ಪರ ಬೆಳವಣಿಗೆಯನ್ನು ಹೊಂದುತ್ತಲಿರುವದನ್ನು ವರದಿಯಲ್ಲಿ ಕಾಣಿಸಿದ ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ.

### ಸಹಕಾರಿಯಲ್ಲಿ ಸದಸ್ಯತ್ವದ ಹಾಗೂ ಶೇರು ಬಂಡವಾಳ ವಿವರ:

ದಿನಾಂಕ 31–03–2026ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

| ಸಾಮಾನ್ಯ ಸದಸ್ಯತ್ವ | | ಶೇರು ಬಂಡವಾಳ | |
|---|---|---|---|
| 2024-25 | 2025-26 | 2024-25 | 2025-26 |
| 2471 | 2542 | 73,60,300/- | 74,56,100/- |

### ಠೇವಣಾತಿಗಳು:

ದಿನಾಂಕ 31–03–2026 ಕ್ಕೆ ಸಹಕಾರಿಯಲ್ಲಿ ಒಟ್ಟು ವಿವಿಧ ರೀತಿಯ ಠೇವಣಿಗಳ ಮೊತ್ತ ರೂ. 32,44,48,036/– ರಷ್ಟಿರುತ್ತದೆ ಹಾಗೂ ಸಹಕಾರಿಯ ಕಳೆದ ಸಾಲಿಗೆ ಹೋಲಿಸಿದರೆ ರೂ. 8,94,68,078/– ಗಳಷ್ಟು ಠೇವಣಿಗಳು ಹೆಚ್ಚಾಗಿರುತ್ತದೆ. ಇದು ನಮ್ಮ ಸದಸ್ಯರಯ ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಅಲ್ಲದೇ ಕರ್ನಾಟಕ ಸೌಹಾರ್ದ ಕಾಯ್ದೆಯ ಅನ್ವಯ ಎಲ್ಲಾ ಸದಸ್ಯರು ಸಹಕಾರಿಯಲ್ಲಿ ಖಾತೆಗಳನ್ನು ತೆರೆದು ವ್ಯವಹರಿಸಲು ಹಾಗೂ ತಮ್ಮ ಠೇವಣಿಗಳನ್ನು ಇಟ್ಟು ಸಹಕಾರಿಯ ಏಳ್ಗೆಯಲ್ಲಿ ಸಹಕರಿಸಿ ತನ್ಮೂಲಕ ಸಹಕಾರಿಯಿಂದ ದೊರೆಯುವ ವಿವಿಧ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳಲು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

**ದುಡಿಯುವ ಬಂಡವಾಳ :**

ದಿನಾಂಕ 31-03-2025 ಕ್ಕೆ ಸಹಕಾರಿಯದುಡಿಯುವ ಬಂಡವಾಳವು ರೂ. 27,75,77,757/- ಲಕ್ಷಗಳಷ್ಟಿತ್ತು ಹಾಗೂ ದಿನಾಂಕ 31-03-2026 ಕ್ಕೆ ದುಡಿಯುವ ಬಂಡವಾಳವು ರೂ. 37,64,50,683/- ಲಕ್ಷಗಳಾಗಿದೆ.

**ಸಾಲ ಮತ್ತು ಮುಂಗಡಗಳು :**

ಸಹಕಾರಿಯ ಮೂಲ ಉದ್ದೇಶವಾದ ಪರಸ್ಪರ ಸಹಕಾರ-ಪರಸ್ಪರಅಭಿವೃದ್ಧಿಗೆಅನುಗುಣವಾಗಿ ಸಹಕಾರಿಯು ಈ ಸಾಲಿನಲ್ಲಿಯೂ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಸಾಲವನ್ನು ನೀಡಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಸಾಲ ಮತ್ತು ಮುಂಗಡಗಳು ರೂ. 26,95,45,173/- ಇರುತ್ತವೆ ಪ್ರಸಕ್ತ ಸಾಲಿನಲ್ಲಿ ಸಹಕಾರಿಯ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಪರಿಶ್ರಮದಿಂದಾಗಿ ಸಹಕಾರಿಯು ವಸೂಲಾತಿಯಲ್ಲಿ ಶೇ.96.61%ರಷ್ಟು ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

**ಹೂಡಿಕೆಗಳು : ದಿನಾಂಕ 31-03-2026 ಕ್ಕೆ ಸಹಕಾರಿಯು**

| | | |
|---|---|---|
| 1) | ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕನಲ್ಲಿ ಮುದ್ದತ್ ಠೇವಣಿ ರೂಪದಲ್ಲಿ | ರೂ.2,59,53,094/- |
| 2) | ಸುಕೊ ಬ್ಯಾಂಕ್ ಮಾನವಿ ಶಾಖೆಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ | ರೂ.1,58,52,658/- |
| 3) | ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನವಿ ಶಾಖೆಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ | ರೂ.1,39,87,923/- |
| 4) | ವಿಕಾಸ ಬ್ಯಾಂಕನಲ್ಲಿ(ಸಿಂಧನೂರ್ ಶಾಖೆ) ಮುದ್ದತ್ ಠೇವಣಿ ರೂಪದಲ್ಲಿ | ರೂ.2,60,96,085/- |
| 5) | ಇ-ಸ್ಟಾಂಪಿಂಗ್ ನ ಭದ್ರತ ಠೇವಣಿಯಲ್ಲಿ | ರೂ.50,000/- |
| 6) | ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ಶೇರು | ರೂ.25,000/- |
| 7) | ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದಲ್ಲಿ ಶೇರು | ರೂ.10,000/- |
| | ಒಟ್ಟು | ರೂ. 8,19,74,760/- |

**ಲೆಕ್ಕ ತಪಾಸಣೆ:**

ಸಹಕಾರಿಯ ಲೆಕ್ಕ ಪತ್ರಗಳು ದಿನಾಂಕ 31-03-2026 ರವರೆಗೆ ತಪಾಸಣೆಗೋಂಡಿದ್ದು ಸಹಕಾರಿಯು "ಎ" ವರ್ಗದಲ್ಲಿ ವರ್ಗೀಸಲ್ಪಟ್ಟಿದೆ. ಸನ್ 2025-26 ನೇ ಸಾಲಿನಲ್ಲಿ ಲೆಕ್ಕ ತಪಾಸಣೆ ವರದಿಯಲ್ಲಿ ಯಾವೂದೇ ನ್ಯೂನ್ಯತೆ ಕಂಡುಬಾರದ ಕಾರಣ ಆಢಳಿತ ಮಂಡಳಿಯು ಅನುಪಾಲನಾ ವರದಿ ನೀಡಿರುವುದಿಲ್ಲ. ಸನ್ 2025-26 ನೇ ಸಾಲಿನ ಶಾಸನ ಬದ್ದ ಲೆಕ್ಕ ತಪಾಸಣೆಯನ್ನು ಲೆಕ್ಕ ಪರಿಶೋಧಕರು ಸಿ.ಎ. ಎಸ್. ಡಿ. ಪ್ರಸಾದ್ ವಿರಪನೇನಿ, ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ &ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಮಾನವಿ-584123 ತಾ॥ ಮಾನವಿ, ಜಿ॥ ರಾಯಚೂರು ಇವರು ಲೆಕ್ಕ ಪರಿಶೋಧನೆಯನ್ನುಮಾಡಿಯೋಗ್ಯ ಮಾರ್ಗದರ್ಶನವನ್ನು ನೀಡಿರುತ್ತಾರೆ.

**ಸಭೆಗಳು:**

ವರದಿ ಸಾಲಿನಲ್ಲಿ 8 ಆಡಳಿತ ಮಂಡಳಿಯ ಸಭೆಗಳು ಮತ್ತು 1 ವಿಷೇಶ ಆಢಳಿತ ಮಂಡಳಿಯ ಸಭೆ ನಡೆದಿವೆ. ಈ ಎಲ್ಲಾ ಸಭೆಗಳಲ್ಲಿನ ನಿರ್ಣಯಗಳನ್ನು ಸಭೆ ಪರಿಶೀಲಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ಲಾಭ ಗಳಿಕೆ ಹಾಗೂ ವಿತರಣೆ:**

ಸನ್ 2025-26ನೇ ಸಾಲಿನಲ್ಲಿ ರೂ.1,11,01,363/- ಲಾಭ ಗಳಿಸಿದೆ. ಇದು ಸಹಕಾರಿಯ ಸದಸ್ಯರು ತೋರಿಸಿದ ವಿಶ್ವಾಸ, ಸಹಕಾರ ಹಾಗೂ ಸಿಬ್ಬಂದಿ/ನಿರ್ದೇಶಕ ಮಂಡಳಿಯವರ ಅವಿರತ ಶ್ರಮದ ಫಲ ಎಂದು ತಿಳಿಸಲು ನನಗೆ ಅತೀವ ಸಂತೋಷವಾಗುತ್ತದೆ ಹಾಗೂ ಈ ವರದಿ ಸಾಲಿನಲ್ಲಿ ಸಹಕಾರಿಯ ಉಪನಿಯಮ 80 ರ ಪ್ರಕಾರ ಸನ್ 2025-26 ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ನಿವ್ವಳ ಲಾಭವನ್ನು ವಿಭಜನೆ ಮಾಡಬೇಕಾಗಿದ್ದು, ಈ ಕೇಳಗಿನಂತೆ ಆಢಳಿತ ಮಂಡಳಿ ಸಭೆಯಲ್ಲಿ ವಿಭಜನೆ ಮಾಡಿ ಮಹಾಸಭೆಗೆ ಶಿಫಾರಸ್ಸು ಮಾಡಿದ್ದನ್ನು ಸಭೆಯಅನುಮೋದನೆಗಾಗಿ ಮಂಡಿಸಿದೆ.

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## ವಿಷಯ & ಟಿಪ್ಪಣಿ: 16 ರ ವಿವರಣೆ

## ಸಹಕಾರಿಯಉಪವಿಧಿ ಸಂಖ್ಯೆ-32(2)ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳು

1) ಕಾರ್ಯಚರಣೆಯಲ್ಲಿಕೊರತೆಏನಾದರುಇದ್ದಲ್ಲಿಅದರ ಪುನರಾವಲೋಕನ.

-ಅಂತಹ ಕೊರತೆ ಯಾವುದು ಇರುವುದಿಲ್ಲ.

2) ದೀರ್ಘಾವಧಿಯ ಯೋಜನೆಗಳು ಮತ್ತು ವಾರ್ಷಿಕಕಾರ್ಯಾಚರಣೆ ಯೋಜನೆಗಳ ಅನುಮೋದನೆ.

1) ಮುಂಬರುವ ದಿನಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡ ಕಟ್ಟಲು, ಅದಕ್ಕಾಗಿ ಕಾರ್ಯ ಯೋಜನೆ ರೂಪಿಸಲು ಮುಂದಿನ ಮೂರು ವರ್ಷಗಳ ದೀರ್ಘಾವಧಿಯ ಯೋಜನೆ ಮಾಡಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲು ಹಾಗೂ ಈ ಸಮಿತಿಗೆ ಸಹಕಾರಿಯ ಹೊಸ ಕಟ್ಟಡ ಕಟ್ಟಲು ಅದಕ್ಕೆ ರೂಪು-ರೇಷೆಯನ್ನು, ಕಟ್ಟಡದ ವಾಸ್ತವಿಕ ವೆಚ್ಚವನ್ನು ಅಂದಾಜಿಸಲು ಇದಕ್ಕೆ ಸಂಭಂದಿದಂತೆ ಕೆಲಸಕಾರ್ಯಗಳನ್ನು ನಿರ್ವಹಿಸಲು ಯೋಜನೆ ರೂಪಿಸಲು ಸಭೆಯ ಅನುಮೋದನೆ ಕೋರಿರುತ್ತದೆ.

2) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಶಾಖೆಗಳನ್ನು ಆರಂಭಿಸಲು ಸಭೆಯ ಅನುಮೋದನೆಗೆ ಕೋರಿರುತ್ತದೆ. ಸಭೆಯ ಅನುಮೋದನೆ ಕೋರಿರುತ್ತದೆ.

3) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಸಹಕಾರಿಯಿಂದ ಪೂರಕ ಸಂಸ್ಥೆಗಳನ್ನು ಆರಂಭಿಸಲು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಸಭೆಯ ಅನುಮೋದನೆಯನ್ನು ಕೋರುತ್ತದೆ.

3) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳ ಸೃಜನೆ, ಮೀಸಲು ನಿಧಿ ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.

– ಯಾವುದೇ ಬದಲಾವಣೆ ಇರುವುದಿಲ್ಲ.

4) ಸಂಯುಕ್ತ ಸಹಕಾರಿಯು ಮಂಡಲಿಯ ನಿರ್ದೇಶಕರನ್ನು ತೆಗೆದುಹಾಕಿರುವುದರ ಮತ್ತು ಮಂಡಲಿಯು ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡಿರುವುದರ ಪರಿಗಣನೆ.

– ಅಂತಹ ಯಾವುದೇ ಪ್ರಕರಣ ಇರುವುದಿಲ್ಲ.

5) ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.

– ಸಹಕಾರಿಯಲ್ಲಿ ಠೇವಣಿ ಮತ್ತು ಸಾಲ ಹಾಗೂ ಸಹಕಾರಿಯಲ್ಲಿ ನೀಡುವ ಇನ್ನಿತರ ಸೇವೆಗಳನ್ನು ಉಪಯೋಗಿಸುತ್ತಿದ್ದರೆ.

6) ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲದ, ಸುಸ್ತಿ ಸಾಲದ ವಸೂಲಿ ಕ್ರಮದ ಪರಿಶೀಲನೆ.

ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲಗಳು ಎಲ್ಲವೂ ಆಸ್ತಿ ಒತ್ತಿ ಸಾಲ, ವಾಹನ ಸಾಲ, ವಿಮಾ ಪಾಲಸಿ ಒತ್ತಿ ಸಾಲ ಮತ್ತು ಮುದ್ದತು ಠೇವಣಿ ಆಧಾರಿತ ಸಾಲಗಳಾಗಿದ್ದು ಇವುಗಳ ನಿರ್ದೇಶಕರು ಶೇ.10% ಕ್ಕಿಂತ ಹೆಚ್ಚಿರುವುದಿಲ್ಲ ಹಾಗೂ ಈ ಎಲ್ಲಾ ಸಾಲಗಳು ನಿಯಮಿತ ಪಾವತಿಯನ್ನು ಹೊಂದಿದ್ದು ಸುಸ್ತಿಗಿರುವುದಿಲ್ಲ. ಇದನ್ನು ಸಭೆ ಪರಿಶೀಲಿಸಿ ಸಭೆ ಅನುಮೋದಿಸ ಬೇಕಾಗಿರುತ್ತದೆ.

7) ಸಹಕಾರಿ ಕಾಯ್ದೆ ಅನ್ವಯ ಇಂತಹ ಸುಸ್ತಿ ಸಾಲಗಳ ಮೇಲೆ ದಾವ ಹೂಡಲು ಸಭೆ ಪರಿಶೀಲಿಸಿ ಸಭೆ ಅನುಮೊದನೆ.

– ಸಭೆಯು ಸುಸ್ತಿದಾರರನ್ನು ಪರಿಶೀಲಿಸಿ ಅಂತಹ ಸಾಲಗಳ ಮೇಲೆ ದಾವ ಹೂಡಲು ಸಭೆ ಅನುಮೋದಿಸಬಹುದಾಗಿದೆ.

8) ಸಹಕಾರಿಗಳ ಒಟ್ಟು ಗೂಡಿಸುವಿಕೆ, ಸಹಕಾರಿಯ ವಿಭಜನೆ, ಇನ್ನೊಂದು ಅಥವಾ ಹೆಚ್ಚಿನ ಸಹಕಾರಿಗಳೊಡನೆ ಸಹಕಾರಿಯ ವಿಲೀನತೆ ಮತ್ತು ಸಹಕಾರಿಯ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ಪ್ರಸ್ತಾಪಗಳಿದ್ದಲ್ಲಿ ಪರಿಶೀಲನೆ.

–ಇರುವುದಿಲ್ಲಾ.

9) ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.

– ಸಭೆಯು ಪರಿಶೀಲಿಸಿ ಚ್ಚರ್ಚಿಸಿ ನಿರ್ಣಯ ಮಾಡಿ ಅನುಮೋದಿಸ ಬಹುದಾಗಿದೆ.

10) ಮಂಡಲಿಯ ನಿರ್ದೇಶಕರುಗಳನ್ನು ಹಾಜರಿದ್ದು ಮತ ನೀಡಿದ ಸದಸ್ಯರ ಮೂರನೇ ಎರಡರಷ್ಟು ಬಹುಮತದಿಂದ ತೆಗೆದುಹಾಕುವುದು. – ಸಭೆಯು ಪರಿಶೀಲಿಸಿ ಅನುಮೋದಿಸ ಬೇಕಾಗಿರುತ್ತದೆ.

11) ಕಾಯ್ದೆ ಕಲಂ 35ರ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರಲ್ಲಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ಸೇರ್ಪಡಿಸುವ ಸಂಬಂಧದಲ್ಲಿಕೈಗೊಂಡ ಕ್ರಮಗಳ ಬಗ್ಗೆ ಮಂಡಲಿಯು ನೀಡಿರುವ ಅನುಸರಣಾ ವರದಿಯ ಪರಿಶೀಲನೆ. – ಸಭೆಯು ಪರಿಶೀಲಿಸಿ ಅನುಮೋದಿಸ ಬೇಕಾಗಿರುತ್ತದೆ.

12) ಮಂಡಳಿಯ ನಿರ್ದೇಶಕರುಗಳನ್ನು ತೆಗೆದ ಹಾಕುವ ಕುರಿತು. –ಅಂತಹ ಪ್ರಕರಣಗಳು ಇರುವುದಿಲ್ಲ.

13) ಸಹಕಾರಿಯು ಇತರೆ ಬ್ಯಾಂಕಿನಲ್ಲಿ ಹೊಂದಿರುವ ಸದಸ್ಯತ್ವದ ವರದಿ.

1} ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರುಗಳಲ್ಲಿ ಸದಸ್ಯತ್ವವನ್ನು ಹೊಂದಿದೆ.

2} ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ, ರಾಯಚೂರು ಇವರುಗಳಲ್ಲಿ ಸದಸ್ಯತ್ವವನ್ನು ಹೊಂದಿದೆ.

3} ರಾಯಚೂರು ಜಿಲ್ಲಾ ಮಧ್ಯವರ್ತಿ ಸಹಕರ ಬ್ಯಾಂಕ್ ,ರಾಯಚೂರು ಇವರುಗಳಲ್ಲಿ ಸದಸ್ಯತ್ವವನ್ನು ಹೊಂದಿದೆ.

14) ಕಾಯ್ದೆಯ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪರಿಶೀಲನೆ; –ಅಂತಹಯಾವುದೇ ಪ್ರಕರಣಗಳು ಇರುವುದಿಲ್ಲ.

15) ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ಮಂಡಳಿಯು ನಿರಾಕರಿಸಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿಅದರ ಪರಿಗಣನೆ; –ಅಂತಹಯಾವುದೇ ಪ್ರಕರಣಗಳು ಇರುವುದಿಲ್ಲ.

16) ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ; –ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

17) ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವ ಅಂತ್ಯಗೊಂಡ ಬಗೆಗಿನ ಸಂಕ್ಷಿಪ್ತ ವರದಿಯ ಪರಿಶೀಲನೆ; –ಟಿಪ್ಪಣಿ 3ರಲ್ಲಿ ಮಾಹಿತ ನೀಡಲಾಗಿದೆ.

18) ಸಹಕಾರಿಯ ಸಮಾಪನೆ; –ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

19) ಕಾಯ್ದೆಯನ್ವಯ ನೋಂದಣಿಗೊಂಡ ಇತರೆ ಇಪ್ಪತ್ತು ಸಹಕಾರಿಗಳ ಜೊತೆ ಸೇರಿ 'ಒಕ್ಕೂಟ ಸಹಕಾರಿ' ಆರಂಭಿಸುವುದು ಹಾಗೂ ಅದಕ್ಕೆ ಷೇರು ಹಣ ಮತ್ತು ವ್ಯಾಪಾರ ವಹಿವಾಟಿಗೆ ಅಗತ್ಯ ಇತರ ಸೌಲಭ್ಯಗಳನ್ನು ಒದಗಿಸುವ ಪ್ರಸ್ತಾವನೆಗಳಿಗೆ ಅನುಮೋದಿಸುವುದು; –ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

20) ಕಾಯ್ದೆ ಪ್ರಕರಣ 14(2)ರ ಅನ್ವಯ ಒಂದು ಅಥವಾ ಒಂದ ಕ್ಕಿಂತ ಹೆಚ್ಚು ಸಹಕಾರಿಯೊಂದಿಗೆ ಸೇರಿ ಪಾಲುದಾರಿಕೆ ಸಂಸ್ಥೆಯನ್ನು ಆರಂಭಿಸುವುದು ಮತ್ತು ಇಂತಹ ಪಾಲುದಾರಿಕೆಗೆ ಪಾಲು ಹಣ ನೀಡುವುದು;
–ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

21) ಕಾಯ್ದೆ ಪ್ರಕರಣ 15ರಂತೆ ಸಹಕಾರಿಯು ತನ್ನ ಉದ್ದೇಶದ ಈಡೇರಿಕೆಗಾಗಿ ಯಾವುದೇ ಪೂರಕ ಸಂಸ್ಥೆಗಳನ್ನು ಆರಂಭಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು. –ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

22) ಕಾಯ್ದೆ ಪ್ರಕರಣ 16ರನ್ವಯ ಸಾಮಾನ್ಯ ನಿಕಾಯದಯ ಅನುಮೋದನೆಯೊಂದಿಗೆ ತಮ್ಮ ಉದ್ದೇಶದ ಈಡೇರಿಕೆಗಾಗಿ ಯಾವುದೇ ಸಹೋದ್ಯಮವನ್ನು ಆರಂಭಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು ಮತ್ತು ಸಹೋದ್ಯಮದ ಕಾರ್ಯಾಚರಣೆಗೆ ಅಗತ್ಯವಿರುವ ಪಾಲು ಬಂಡವಾಳ, ಮತ್ತಿತರ ಸೌಲಭ್ಯಗಳನ್ನು ಒದಗಿಸುವುದು;
–ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

23) ಮಂಡಲಿಯ ಸಲಹೆಯ ಮೇರೆಗೆ ಯೋಗ್ಯ ಪ್ರಕರಣಗಳಲ್ಲಿ ಮುಳುಗು ಮತ್ತು ಹೊಕ್ಕು ಬಾಕಿ ಸಾಲವನ್ನು ವಜಾ ಮಾಡಲು ನಿರ್ಧರಿಸುವುದು;– ಸಹಕಾರಿಯ ಅನುಕೂಲಕ್ಕೆ ತಕ್ಕತೆ ನಡೆದುಕೊಳ್ಳಲು ಮಂಡಳಿಗೆ ಅಧಿಕಾರ ನೀಡಲು ಸಭೆಗೆ ಕೋರಲಾಗಿದೆ

24) ಮಂಡಲಿಯು ಸದಸ್ಯರಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ಒದಗಿಸಲು ತೆಗೆದುಕೊಂಡ ಕ್ರಮದ ಮತ್ತು ಮುಂದಿನ ವರ್ಷಕ್ಕೆ ಆ ಬಗ್ಗೆ ತಯಾರಿಸಿದ ಕಾರ್ಯಕ್ರಮದ ಅವಲೋಕನ.
–ಸಭೆಯ ನಿರ್ಣಯಕ್ಕೆ ಮಂಡಿಸಲಾಗಿದೆ.

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## ಸನ್ 2025–26 ನೇ ಸಾಲಿನ ಲೆಕ್ಕಪರಿಶೋಧಿತ ಲಾಭ ಹಾನಿ ಖಾತೆ ಹಾಗೂ ಅಢವೆ ಪತ್ರಿಕೆ

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ ತಾ.ಮಾನವಿ, ಜಿ: ರಾಯಚೂರು

ದಿನಾಂಕ 01–04–2025 ರಿಂದ 31/03/2026 ರವರೆಗಿನ ದಿನಾಂಕ 31/03/2026 ಕ್ಕೆ ಇದ್ದಂತೆ ಲಾಭ ಮತ್ತು ನಷ್ಟದ ತಃಖ್ತೆ

| | | | |
|---|---|---|---|
| ಠೇವುಗಳ & ಬ್ಯಾಂಕ ಸಾಲಗಳ ಮೇಲೆ ಬಡ್ಡಿ ಕೊಟ್ಟದ್ದು | 3,13,35,031.40 | ಗುಂತಾವಣಿಗಳ ಮೇಲೆ ಬಂದ ಆದಾಯ & ಸಾಲಗಳ ಮೇಲೆ ಬಂದ ಬಡ್ಡಿ | 5,13,94,181.00 |
| ಸಿಬ್ಬಂದಿ ವೆಚ್ಚಗಳು &ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು | 99,77,357.54 | | |
| ನಿವ್ವಳ ಲಾಭಾ 31/03/2026 ಕ್ಕೆ ಇದ್ದಂತೆ | 1,11,01,363.48 | ಇತರೆ ಆದಾಯ | 10,19,571.42 |
| ಒಟ್ಟು | 5,24,13,752.42 | ಒಟ್ಟು | 5,24,13,752.42 |

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ ತಾ.ಮಾನವಿ, ಜಿ: ರಾಯಚೂರು

ದಿನಾಂಕ 31/03/2026 ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತ:ಖೆ

| | | | |
|---|---|---|---|
| ಸದ್ಯಸರ ಷೇರು ಬಂಡವಾಳ | 74,56,100.00 | ನಗದು ಶಿಲ್ಕು | 34,57,533.00 |
| ಸಂಘದ ನಿಧಿಗಳು | 4,45,46,517.25 | ಬ್ಯಾಂಕು ಖಾತೆಗಳು | 2,95,71,051.19 |
| ಸದ್ಯಸರ ಠೇವಣಿಗಳು | 32,44,48,036.35 | ಹೂಡಿಕೆಗಳು | 8,19,74,760.00 |
| ಬ್ಯಾಂಕಿನಿಂದ ಹುಡಿಕೆ ಮೇಲೆ ತಂದ ಸಾಲ | 29.50 | ಸದ್ಯಸರ ಸಾಲಗಳು | 26,95,45,173.00 |
| ಆವಕಾಶಗಳು | 45,99,901.61 | ಚರಾಸ್ತಿಗಳು | 23,84,861.00 |
| ನಿವ್ವಳ ಲಾಭ 2025–26 | 1,11,01,363.48 | ಸ್ಥಿರಾಸ್ತಿಗಳು | 52,18,570.00 |
| ಒಟ್ಟು | 39,21,51,948.19 | ಒಟ್ಟು | 39,21,51,948.19 |

For Shivapriya Pattina Souharda Sahakari Sangha Niyamita, Manvi — President
For Shivapriya Pattina Souharda Sahakari Sangha Ni., Manvi — Director
For Shivapriya Pattina Souharda Sahakari Sangha Ni., Manvi — Director
For Shivapriya Pattina Souharda Sahakari Sangha Ni., Manvi — Director
For Shivapriya Pattina Souharda Sahakari Sangha Ni., Manvi — Director
For Shivapriya Pattina Souharda Sahakari Sangha Niyamita, Manvi — Chief Executive Officer

## ದೃಡೀಕರಣ ಪತ್ರ

ನಾನು, ಸಿ.ಎ. ಎಸ್. ಡಿ. ಪ್ರಸಾದ್ ವಿರಪನೇನಿ, ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ & ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಮಾನವಿ–584123 ತಾ॥ ಮಾನವಿ, ಜಿ॥ ರಾಯಚೂರು ಸನ್ನದು ಲೆಕ್ಕಪರಿಶೋಧಕರು ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ, ತಾ॥ ಮಾನವಿ, ಜಿ॥ ರಾಯಚೂರು ಇದರ 2025–26 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿರುತ್ತೇನೆ. ಲೆಕ್ಕಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿಯನ್ನು ಪಡೆದಿರುತ್ತೇನೆ ಹಾಗೂ ಅವುಗಳು ತೃಪ್ತಿಕರವಾಗಿರುವುದು ಕಂಡುಬರುತ್ತದೆ. ನನ್ನ ಜ್ಞಾನ ಹಾಗೂ ತಿಳಿವಳಿಕೆಗೊಳಪಟ್ಟು ಸಂಸ್ಥೆಯವರು ಹಾಜರುಪಡಿಸಿದ ದಾಖಲೆ ಹಾಗೂ ಮಾಹಿತಿಗಳನ್ವಯ ಲಗತ್ತಿಸಿರುವ ವಿವರವಾದ ವರದಿಗೊಳಪಟ್ಟು ಮೇಲ್ಕಂಡ ಲಾಭ–ನಷ್ಟ ಲೆಕ್ಕ ಹಾಗೂ ಅಡಾವೆ ಪತ್ರಿಕೆಯು ದಿನಾಂಕ 31–3–2026 ಕ್ಕೆ ಇದ್ದಂತೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿಯೂ ಹಾಗೂ ಕರಾರುವಕ್ಕಾಗಿಯೂ ಪ್ರಕಟಿಸುತ್ತದೆಂದೂ ದೃಢಿಕರಿಸುತ್ತೇನೆ.

ಎಸ್ ಡಿ ಪ್ರಸಾದ್ ವೀರಪನೇನಿ & ಅಸೋಸಿಯೇಟ್ಸ್

PROPRIETOR F.R.N.015804S

ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ
ಸನ್ನದು ಲೆಕ್ಕ ಪರಿಶೋಧಕರು
ಮಾಲಕರು
ಮೆ.ನಂ.234234
ಸಂಸ್ಥೆ ನಂ. 015804S
ಸ್ಥಳ: ಮಾನವಿ

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## 2025–26 ನೇ ಸಾಲಿನ ಅಂದಾಜು ಆಯ–ವ್ಯಯ,2025–26 ನೇ ಸಾಲಿನ ನಿವ್ವಳ ಆಯ–ವ್ಯಯ, & 2026–27 ಸಾಲಿನ ಮುಂಗಡ ಆಯ–ವ್ಯಯ ಪ್ರತಿಕೆ

### ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಾನವಿ

2025–26 ನೇ ಸಾಲಿನ ಅಂದಾಜು ಆಯ–ವ್ಯಯ,2025–26 ನೇ ಸಾಲಿನ ನಿವ್ವಳ ಆಯ–ವ್ಯಯ, & 2026–27 ಸಾಲಿನ ಮುಂಗಡಆಯ–ವ್ಯಯ ಪ್ರತಿಕೆ

| ವೆಚ್ಚ | 2025–26 ನೇ ಸಾಲಿನ ಅಂದಾಜು ವೆಚ್ಚ | 2025–26 ನೇ ಸಾಲಿನ ನಿವ್ವಳ ವೆಚ್ಚ | 2026–27 ನೇ ಸಾಲಿನ ಅಂದಾಜು ವೆಚ್ಚ | ಆದಾಯ | 2025–26 ನೇ ಸಾಲಿನ ಅಂದಾಜು ಅದಾಯ | 2025–26 ನೇ ಸಾಲಿನ ನಿವ್ವಳ ಅದಾಯ | 2026–27 ನೇ ಸಾಲಿನ ಅಂದಾಜು ಅದಾಯ |
|---|---|---|---|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 2,40,00,000.00 | 2,86,37,948.00 | 3,40,00,000.00 | ಬಡ್ಡಿ ಆದಾಯ | 3,72,00,000.00 | 4,49,90,744.00 | 5,07,00,000.00 |
| ಬ್ಯಾಂಕಿನಿಂದ ತೆಗೆದುಕೋಂಡ ಸಾಲಗಳ ಮೇಲಿನ ಬಡ್ಡಿ | 15,00,000.00 | 26,97,083.40 | 30,00,000.00 | ಗುಂತಾವಳಿಗಳ ಮೇಲೆ ಬಡ್ಡಿ ಆದಾಯ | 53,50,000.00 | 64,03,437.00 | 80,40,000.00 |
| ಸಹಕಾರಿಇನ್ಸೂರೆನ್ಸ್ | 25,000.00 | 35,465.00 | 90,000.00 | ಇತರ ಆದಾಯ | 7,00,000.00 | 10,19,571.42 | 7,70,000.00 |
| ಪಿಗ್ಮಿ ಏಜೆಂಟರ ಕಮಿಷನ್ | 5,00,000.00 | 2,73,955.00 | 5,00,000.00 | | | | |
| ಬ್ಯಾಂಕ್ ಚಾರ್ಜಸ್ | 30,000.00 | 5,480.00 | 30,000.00 | | | | |
| ಇತರೆ ಖರ್ಚುಗಳು | 5,00,000.00 | 4,46,583.75 | 10,00,000.00 | | | | |
| ಸಿಬ್ಬಂದಿ ವೇತನ | 35,00,000.00 | 34,37,406.00 | 40,00,000.00 | | | | |
| ಮುದ್ರಣ ಮತ್ತು ಸ್ಟೇಷನರಿ | 1,50,000.00 | 96,982.00 | 1,50,000.00 | | | | |
| ಲೆಕ್ಕ ಪರಿಶೋಧನಾ ಶುಲ್ಕ | 1,50,000.00 | 95,000.00 | 1,50,000.00 | | | | |
| ದಿನಪತ್ರಿಕೆ ವೆಚ್ಚ | 6,500.00 | 5,315.00 | 9,500.00 | | | | |
| ವಿದ್ಯುತ್ ವೆಚ್ಚ | 1,30,000.00 | 72,009.00 | 1,50,000.00 | | | | |
| ಜಾಹಿರಾತು ವೆಚ್ಚ | 50,000.00 | 10,000.00 | 1,00,000.00 | | | | |
| ವಾರ್ಷಿಕ ಮಹಾ ಸಭೆಯ ವೆಚ್ಚ | 2,00,000.00 | 1,78,865.00 | 2,00,000.00 | | | | |
| ದೂರವಾಣಿ | 30,000.00 | 27,231.30 | 50,000.00 | | | | |
| ಅಂಚೆ ವೆಚ್ಚ | 25,000.00 | 6,424.70 | 30,000.00 | | | | |
| ಕಂಪ್ಯೂಟರ್ ವೆಚ್ಚ | 60,000.00 | 57,909.00 | 2,00,000.00 | | | | |
| ನಿರ್ದೇಶಕ ಮಂಡಳಿಯ ಸಭೆ ವೆಚ್ಚ | 70,000.00 | 9,560.00 | 1,00,000.00 | | | | |
| ಪ್ರವಾಸ ವೆಚ್ಚ/ಭತ್ಯೆ | 70,000.00 | 41,587.00 | 1,00,000.00 | | | | |
| ಸಹಕಾರಿಯ ವೃತ್ತಿ ತೆರಿಗೆ | 2,500.00 | 2,500.00 | 2,500.00 | | | | |
| ಸಹಕಾರಿಯ ಕಟ್ಟಡ ಬಾಡಿಗೆ ವೆಚ್ಚ | 3,60,000.00 | 3,33,816.00 | 3,60,000.00 | | | | |
| ಕಛೇರಿ ನಿರ್ವಹಣಾ ವೆಚ್ಚ | 8,00,000.00 | 7,99,869.00 | 10,00,000.00 | | | | |
| ಸಂಯುಕ್ತ ಸಹಕಾರಿಯ ವೆಚ್ಚ | 35,400.00 | 35,400.00 | 59,000.00 | | | | |
| ಪಿಗ್ಮಿಮಶೀನ್ ನಿರ್ವಹಣೆ ಖರ್ಚು | 25,000.00 | | 25,000.00 | | | | |
| ಪೂಜಾ ಖರ್ಚು | 50,000.00 | 14,362.00 | 50,000.00 | | | | |
| ಸವುಕಳಿ | 4,00,000.00 | 2,80,351.39 | 3,50,000.00 | | | | |
| ಎ ಸಿ ನಿರ್ವಹಣಾ ವೆಚ್ಚ್ | 30,000.00 | 15,000.00 | 1,00,000.00 | | | | |
| ತೆರಿಗೆ ಸಲಹೆಗಾರರ ವೆಚ್ಚ | 1,00,000.00 | 50,000.00 | 1,00,000.00 | | | | |
| ಬ್ಯಾಂಕ ಸಾಫ್ಟವೇರ್ ವಾರ್ಷಿಕ ವೆಚ್ಚ | 24,000.00 | 23,600.00 | 24,000.00 | | | | |
| ಸಿಬ್ಬಂದಿ ಬೊನಸ್ | 5,50,000.00 | 5,00,000.00 | 6,00,000.00 | | | | |
| ಸಾಲ ವಸೂಲಾತಿ ಹಾಗೂ ವಾಹನ ನಿರ್ವಹಣೆ ವೆಚ್ಚ | 75,000.00 | 72,666.00 | 1,00,000.00 | | | | |
| ಸಿಬ್ಬಂದಿ ಭವಿಷ್ಯ ನಿಧಿ/ ಗ್ರಾಚುಟಿ/ಎನ್.ಪಿ.ಎಸ್ | 6,50,000.00 | 6,47,175.00 | 6,50,000.00 | | | | |
| ಜಿ ಎಸ್ ಟಿ ವೆಚ್ಚ | 50,000.00 | 40,055.16 | 60,000.00 | | | | |
| ಇನ್ವರ್ಟರ್ ಮೆಂಟೆನೆನ್ಸ್ | 2,00,000.00 | 62,198.00 | 2,00,000.00 | | | | |
| ಸಹಕಾರಿ ಕಟ್ಟಡ ನಿರ್ವಹಣಾ ವೆಚ್ಚ | 1,00,000.00 | 98,005.00 | 1,20,000.00 | | | | |
| ವಿದ್ಯೈತ್ ಸಾಮಗ್ರಿ ವೆಚ್ಚ | 26,600.00 | | 30,000.00 | | | | |
| ಎಸ್ ಎಮ್ ಎಸ್ ವೆಚ್ಚ | 15,000.00 | | 20,000.00 | | | | |
| ಪಿಎಫ್ ಖರ್ಚು | 50,000.00 | 25,194.24 | 50,000.00 | | | | |
| ಇಇಎಲ್ | 1,50,000.00 | 1,17,902.00 | 1,50,000.00 | | | | |
| ನಿರ್ದೇಶಕ ಪ್ರವಾಸೆ ವೆಚ್ಚ | 60,000.00 | 59,491.00 | 1,00,000.00 | | | | |
| ಎನ್ ಪಿ ಎ | | 20,00,000.00 | | | | | |
| ಅಂದಾಜು ಲಾಭ | 85,00,000.00 | 1,11,01,363.48 | 1,15,00,000.00 | ಲಾಭ ನಷ್ಟ (ನಷ್ಟ) | | | |
| ಒಟ್ಟು | **4,32,50,000.00** | **5,24,13,752.42** | **5,95,10,000.00** | ಒಟ್ಟು | **4,32,50,000.00** | **5,24,13,752.42** | **5,95,10,000.00** |

| ಜಿ ಎಲ್ ಹೆಸರು | 2025–26 ನೇ ಸಾಲಿನ ಅಂದಾಜು ವೆಚ್ಚ | 2025–26 ನೇ ಸಾಲಿನ ನಿವ್ವಳ ವೆಚ್ಚ | ಹೆಚ್ಚುವರಿ ಆದ ವೆಚ್ಚ | ವಿವರಣೆ |
|---|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 2.40.00.000.00 | 2.86.37.948.00 | 46.37.948.00 | ಹೆಚ್ಚುವರಿ ಠೇವಣಾತಿ ಬಂದಿದ್ದರಿಂದ |
| ಬ್ಯಾಂಕಿನಿಂದ ತೆಗೆದುಕೋಂಡ ಸಾಲಗಳ ಮೇಲಿನ ಬಡ್ಡಿ | 15.00.000.00 | 26.97.083.40 | 11.97.083.40 | ಸಹಕಾರಿಯು ಹೆಚ್ಚುವರಿ ಸಾಲ ಪಡೆದು ಮರುಪಾವತಿ ಮಾಡಿದ್ದರಿಂದ (ಸಹಕಾರಿಯ ಠೇವಣಿ ಸಾಲ ಬೇಡಿಕೆ ಹೆಚ್ಚಿದ್ದರಿಂದ) |
| ಸಹಕಾರಿ ಇನ್ಸೂರೆನ್ಸ್ | 25.000.00 | 35.465.00 | 10.465.00 | ಲೆಕ್ಕಪರಿಶೋಧಕರ ಸಲಹೆಯಂತೆ ಇನ್ಸೂರೆನ್ಸ್ ಮಾಡಿಸಿದ್ದರಿಂದ |
| ಎನ್ ಪಿ ಎ | | 20.00.000.00 | 20.00.000.00 | ಎನ್ ಪಿ ಎ ಪ್ರವಧನ ಮಾಡಿದ ಕುರಿತು |

ಹೆಚ್ಚುವರಿಯಾದ ವೆಚ್ಚವನ್ನು ಸಭೆಗೆ ಮಂಡಿಸಲಾಗಿದ್ದು ಸಭೆಯು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

## ಸನ್ 2025–26 ನೇ ಸಾಲಿನಲ್ಲಿ ನಿವ್ವಳ ಲಾಭವನ್ನು ವಿಲೇವಾರಿ

ಒಟ್ಟು ನಿವ್ವಳ ಲಾಭ ಸನ್ 2025–2026 ಕ್ಕೆ ರೂ. 1,11,01,363.49ಮೊತ್ತದ ಲಾಭದ ಹಂಚಿಕೆಯ ವಿವರ

| ಕ್ರ.ಸಂ. | ವಿವರ | ಪ್ರತಿಶತ | ರೂಪಾಯಿ |
|---|---|---|---|
| 1. | ಕಾಯ್ದಿಟ್ಟ ನಿಧಿ | 25% | 27,75,340.87 |
| 2. | ಸಹಕಾರ ಶಿಕ್ಷಣ ನಿಧಿ | 2% | 2,22,027.27 |
| 3. | ಅನಿರೀಕ್ಷಿತ ನಷ್ಟಗಳು, ಸಾದಿಲ್ವಾರು ವೆಚ್ಚಗಳನ್ನು ಭರಿಸಲುಕಾರ್ಯಾಚರಣೆಗೆ ಮೀಸಲು ನಿಧಿ | 20% | 22,20,272.70 |
| 4. | ಸಾಮಾನ್ಯಕ್ಷೇಮ ನಿಧಿ | 5% | 5,55,068.17 |
| 5. | ಸಿಬ್ಬಂಧಿ ಕ್ಷೇಮ ನಿಧಿ | 5% | 5,55,068.17 |
| 6. | ಕಟ್ಟಡ ನಿಧಿ | 20% | 22,20,272.70 |
| 7. | ಶಿವಪ್ರಿಯ ಸದಸ್ಯರಕ್ಷೇಮ ನಿಧಿ | 5% | 5,55,068.17 |
| 8. | ನಿರ್ದೇಶಕರ ಕ್ಷೇಮ ನಿಧಿ | 1% | 1,11,013.63 |
| 9. | ಸಹಕಾರ ಅಕಾಡೆಮಿ(ನೊಂ), ಮೈಸೂರು ಇದಕ್ಕೆ ಶೇ. 0.50 | 0.50% | 55,506.82 |
| 10. | ಸದಸ್ಯರಿಗೆ ಲಾಭಾಂಶ 17% | 17% | 12,67,537.00 |
| 11. | ಸಹಕಾರಿಯ ವ್ಯವಹಾರಅಭಿವೃದ್ಧಿ ನಿಧಿ | 5% | 5,55,068.17 |
| 12. | ಉಳಿತಾಯ | | 9,119.80 |
| | ಒಟ್ಟು ನಿವ್ವಳ ಲಾಭ ಸನ್ 2025–2026 ಕ್ಕೆ | | 1,11,01,363.49 |
| | ಸಿಬ್ಬಂದಿ ಬೋನಸ್ 31/03/2026 ಕ್ಕೆ ಪ್ರಾವಿಷನ್ ಮಾಡಲಾಗಿದ್ದು | | 5,02,225.00 |

ಈ ವಿಲೇವಾರಿ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದಿಸಬಹುದಾಗಿದೆ.

**<u>ಸಹಕಾರಿಯ ಕಾರ್ಯಕಾರಿ ಮಂಡಳಿಯ ಪರವಾಗಿ ಅಧ್ಯಕ್ಷರಿಂದ ಅಭಿನಂದನೆಗಳು</u>**

* ಸಹಕಾರಿಯ ಮೇಲೆ ವಿಶ್ವಾಸ ವಿಟ್ಟುತಮ್ಮ ಠೇವಣಿಗಳನ್ನು ತೊಡಗಿಸಿದ ಎಲ್ಲಾಠೇವಣಿದಾರರಿಗೆ, ಸದಸ್ಯರಿಗೆ ನಮ್ಮ ಆಢಳಿತ ಮಂಡಳಿಯ ಹಾಗೂ ಸಿಬ್ಬಂದಿಯ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು.

* ಕರ್ನಾಟಕರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿನಿ,. ಬೆಂಗಳೂರು ಇದರ ಆಢಳಿತ ಮಂಡಳಿ ಹಾಗೂ ಸರ್ವ ಸಿಬ್ಬಂದಿ ವರ್ಗದವರತರಬೇತಿ ಹಾಗೂ ಮಾರ್ಗದಶನಕ್ಕಾಗಿ ನಮ್ಮ ಆಢಳಿತ ಮಂಡಳಿಯ, ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರ ಪರವಾಗಿಅಭಿನಂದನೆಯನ್ನು ತಿಳಿಸುತ್ತೇನೆ.

* ಸನ್ 2025–26ನೇ ಸಾಲಿನ ಶಾಸನ ಬದ್ದ ಲೆಕ್ಕ ತಪಾಸಣೆಯನ್ನು ಲೆಕ್ಕ ಪರಿಶೋಧಕರು ಸಿ.ಎ. **ಎಸ್. ಡಿ. ಪ್ರಸಾದ್ ವಿರಪನೇನಿ, ಸಿ ಎ ಎಸ್ ಡಿ ಪ್ರಸಾದ್ ವೀರಪನೇನಿ &ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಮಾನವಿ–584123 ತಾ॥ ಮಾನವಿ, ಜಿ॥ ರಾಯಚೂರು** ಇವರು ಲೆಕ್ಕ ಪರಿಶೋಧನೆಯನ್ನುಮಾಡಿಯೋಗ್ಯ ಮಾರ್ಗದರ್ಶನವನ್ನು ನೀಡಿರುತ್ತಾರೆ. ಕಾರಣ ಅವರಿಗೆ ನಮ್ಮ ಆಢಳಿತ ಮಂಡಳಿಯ, ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರ ಪರವಾಗಿಅಭಿನಂದನೆಯನ್ನು ತಿಳಿಸುತ್ತೇನೆ.

* ಸಹಕಾರಿಯ ಸಭೆಗಳಿಗೆ ನಿರ್ದೇಶಕರು ಹಾಜರಾಗಿ ಸಹಕಾರಿಯ ಕಾರ್ಯಕಲಾಪಗಳನ್ನು ಆಸಕ್ತಿ ಹಾಗೂ ಶ್ರದ್ಧೆಯಿಂದಕಾರ್ಯ ನಿರ್ವಹಿಸಿದ್ದಕ್ಕಾಗಿ ಹಾಗೂ ಸಹಕಾರಿಯ ಸರ್ವತೋಮುಖ ಅಭಿವೃದ್ದಿಗಾಗಿ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡಿ ಸಭೆಗಳಲ್ಲಿ ನಿರ್ಣಯ ತೆಗೆದುಕೊಳ್ಳಲು ಸಹಕಾರಿಯಾಗಿರುತ್ತಾರೆ. ಈ ಎಲ್ಲಾ ಅಭಿವೃದಿಗೆ ಕಾರಣೀಭೂತರಾದ ನಿರ್ದೇಶಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

* ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನ್ವಿ, ಇದರ ಅಧ್ಯಕ್ಷರು ಹಾಗೂ ಕರ್ನಾಟಕರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿನಿ,. ಬೆಂಗಳೂರು ಇದರ ನಿರ್ದೇಶಕರಾದ **ಶ್ರೀ ಆರ್.ತಿಮ್ಮಯ್ಯ ಶೆಟ್ಟಿ** ಹಾಗೂ ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನ್ವಿ ಇದರ ಸಿಬ್ಬಂದಿವರ್ಗ, ಆರ್.ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ **ಶ್ರೀ ವಿಶ್ವನಾಥ ಪಾಟೀಲ್ ತೊರಣದಿನ್ನಿ** ಹಾಗೂ ಆರ್.ಡಿ.ಸಿ.ಸಿ. ಬ್ಯಾಂಕ್‌ನ ಸಿಬ್ಬಂದಿವರ್ಗ, ಬೀಳಿಗಿ ಪಟ್ಟಣ ಸಹಕಾರಿ ಬ್ಯಾಂಕ ಮಾನ್ವಿ, ಎಸ್.ಬಿ.ಐ ಬ್ಯಾಂಕ್ ಮಾನ್ವಿ, ಮತ್ತು ಐ.ಸಿ.ಐ.ಸಿಐ ಬ್ಯಾಂಕ್, ಸುಕೊ ಬ್ಯಾಂಕ್ ಮಾನವಿ ಶಾಖೆ ಮತ್ತು ವಿಕಾಸ್ ಬ್ಯಾಂಕ್ ಸಿಂಧನೂರ್ ಶಾಖೆ , ಕೆನರ ಬ್ಯಾಂಕ್ ಮಾನವಿ ಶಾಖೆ ಮತ್ತು ಯುನಿಯನ್ ಬ್ಯಾಂಕ್ ಆಫ್ ಇಂಡಿಯ ಮಾನವಿ ಶಾಖೆ ಮತ್ತು ಯಸ್ ಬ್ಯಾಂಕ ಮಾನವಿ ಶಾಖೆ & ಅಕ್ಸಿಸ್ ಬ್ಯಾಂಕ್ ಮಾನವಿ ಶಾಖೆ ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ ಮಾನವಿ ಶಾಖೆ ಈ ಎಲ್ಲಾ ಬ್ಯಾಂಕುಗಳ ಹಾಗೂ ಮಾನವಿ ಪಟ್ಟಣದ ಎಲ್ಲಾ ಸಹಕಾರಿ ಸಂಘ/ಸೌಹಾರ್ದ ಸಹಕಾರಿಯ ಅಧ್ಯಕ್ಷರು, ನಿರ್ದಶಕ ಮಂಡಳಿ ವ್ಯವಸ್ಥಾಪಕರಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

* ಮಾನ್ಯ ಕಲಬುರಗಿ ಪ್ರಾಂತೀಯ ಸಹಕಾರಿ ಸಂಘಗಳ ಜಂಟಿ ನಿಬಂಧಕರಿಗೆ ಹಾಗೂ ರಾಯಚೂರು ಉಪ ನಿಭಂದಕರಿಗೆ ಹಾಗೂ ಸಹಾಯಕ ನಿಭಂದಕರಿಗೆ ಮತ್ತು ಸಹಕಾಯಕ ನಿರ್ದೇಶಕರು ಲೆಕ್ಕ ಪರಿಶೋಧನೆ ಇಲಾಖೆ ರಾಯಚೂರು ಇವರುಗಳಿಗೆ ಅಭಿನಂದಿಸುತ್ತೇವೆ.

* ಸಹಕಾರಿ ಏಳ್ಗೆಯಲ್ಲಿ ಅತ್ಯಂತ ಮಹತ್ವದ ಪಾತ್ರ ಸಿಬ್ಬಂದಿ ವರ್ಗದವರದು. ಉತ್ಸಾಹಿ ಹಾಗೂ ಅರ್ಪಣಾ ಮನೋಭಾವನೆದಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಒಟ್ಟಾರೆ ಪ್ರಯತ್ನದ ಫಲವಾಗಿ ಸಹಕಾರಿಯು ಆರಂಭದಿಂಲ್ಲೇ ಪ್ರಗತಿಯನ್ನು ಸಾಧಿಸಿದೆ. ಕಾರಣ ಅವರಿಗೆ ನಮ್ಮ ಆಢಳಿತ ಮಂಡಳಿಯ ಹಾಗೂ ಸರ್ವ ಸದಸ್ಯರ ಪರವಾಗಿ ಅಭಿನಂದನೆಯನ್ನು ತಿಳಿಸುತ್ತೇವೆ.

* ಸಹಕಾರಿಯ ಉನ್ನತಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಬೆಂಬಲ ಹಾಗೂ ಸಹಕಾರವನ್ನು ನೀಡಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸಿ ಮತ್ತೊಮ್ಮೆ ಎಲ್ಲರಿಗೂ ವಂದಿಸಿ ಈ ವರದಿಯನ್ನು ಮುಕ್ತಾಯಗೊಳಿಸುತ್ತೇವೆ.

ಕಾರ್ಯಕಾರಿ ಮಂಡಳಿಯ ಪರವಾಗಿ
**ಶ್ರೀ ಜಾಕೀರ ಮೋಹಿಯುದ್ದಿನ್**
**ಅಧ್ಯಕ್ಷರು**

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ

(ನೊಂದಣಿ ಸಂಖ್ಯೆ : ಸನಿರಾ12/ವಿ–1/ನೊಂದಣಿ/2526/2014–15 ದಿ:17–07–2014)

1ನೇ ಮಹಡಿ,ರಾಘವೇಂದ್ರ ಕಾಂಪ್ಲೆಕ್ಸ್, ಸಂತೋಷಿ ಮಾತಾ ದೇವಸ್ಥಾನ ರಸ್ತೆ, ಪಂಪಾ ಹೌಸಿಂಗ್ ಕಾಲೋನಿ,

ಮಾನವಿ–584123 ಜಿ॥ ರಾಯಚೂರುದೂ॥ 08538-470321, www.shivapriyapssn.com


****************************************************************************

<u>ಸದಸ್ಯರ ಗಮನಕ್ಕೆ:</u>

1) ಮೇಲ್ಕಾಣಿಸಿದ ವಿಷಯಗಳಲ್ಲದೆ ಇತರೆ ಯಾವುದೇ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸುವುದಿದ್ದರೆ ವಾರ್ಷಿಕ ಮಹಾಸಭೆಗೆ 3 ದಿನದ ಮುಂಚಿತವಾಗಿಯೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು.

2) ಮಹಾಸಭೆಯಲ್ಲಿ ಪ್ರಶ್ನೆ ಕೇಳ ಬಯಸುವವರುಮಹಾ ಸಭೆಯ 7 ದಿನದ ಮುಂಚಿತವಾಗಿ ಸಹಕಾರಿಯ ಮುಖ್ಯಕಾರ್ಯನಿರ್ವಹಾಧಿಕಾರಿಗಳಿಗೆ ಲಿಖಿತರೂಪದಲ್ಲಿ ನೀಡಬೇಕು.

3) ಸಹಕಾರಿಯಿಂದ ಸಾಲ ಪಡೆದು, ಸುಸ್ತಿ ಬಾಕಿದಾರರಾದ ಸದಸ್ಯರು ಮಹಾಸಭೆಯಲ್ಲಿಯಾವುದೇ ವಿಷಯದ ಬಗ್ಗೆ ಚರ್ಚಿಸುವಅಧಿಕಾರವಿರುವುದಿಲ್ಲ.

4) ಸೌಹಾರ್ದ ಸಹಕಾರಿಯಕಾಯ್ದೆ ಹಾಗೂ ಉಪನಿಯಮಗಳ ಪ್ರಕಾರ ಸದಸ್ಯರು ಹಕ್ಕು ಚಲಾಯಿಸಲು ಸಹಕಾರಿಯಲ್ಲಿ ಕನಿಷ್ಠ ವ್ಯವಹಾರ ಮಾಡಿರಬೇಕು. ಹಾಗೂ ಈ ನಿಯಮಗಳೊಳಪಟ್ಟಿರುವ ಕಾಯ್ದೆ , ನಿಯಮ & ಉಪನಿಯಮಗಳು ಪಾಲಿಸಿರುಬೇಕು

5) ಗುರುತಿನ ಚೀಟಿ ಪಡೆಯದ ಸದಸ್ಯರು ತಮ್ಮ ಇತ್ತಿಚಿನ ಎರಡು ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ಪಡೆಯಬೇಕು.

6) . . ಷೇರು ಸರ್ಟಿಫಿಕೇಟ್ ಪಡೆಯದೇ ಇದ್ದಲ್ಲಿ, ಷೇರು ಸರ್ಟಿಫಿಕೇಟ್ ಪಡೆಯಲು ವಿನಂತಿ.

7) ಸಹಕಾರಿಯಲ್ಲಿ ಕೆಲವು ಸದಸ್ಯರು ತಮ್ಮ ಸರಿಯಾದ ಅಥವಾ ಪೂರ್ಣ ವಿಳಾಸಗಳನ್ನು ಸಹಕಾರಿಗೆ ಕೊಡದೇ ಇದ್ದ ಪ್ರಯುಕ್ತ ಅವರೊಂದಿಗೆ ಪತ್ರ ವ್ಯವಹಾರ ನಡೆಸಲು ಸಾಧ್ಯವಾಗುವುದಿಲ್ಲ, ಕಾರಣ ಸದಸ್ಯರು ತಮ್ಮ ಸರಿಯಾದ ವಿಳಾಸವನ್ನು ಸಹಕಾರಿಗೆ ನೀಡಿ ಸಹಕರಿಸಬೇಕಾಗಿ ಕೋರಲಾಗಿದೆ.

**ತೆರದ ಅಂಚೆ**

ಗೆ,

ಶ್ರೀಮತಿ/ಶ್ರೀ.______________________________.

______________________________.

______________________________.

______________________________.